

## ಮೊಘಲರ ಕಾಲದ್ದು

ಆಭರಣಗಳಿಗೆ ಹೆಸರುವಾಸಿಯಾಗಿದ್ದು ಮೊಘಲರ ಕಾಲ. ರಾಣಿಯರು ಬಗೆ ಬಗೆಯ ಒಡವೆಗಳಿಂದ ಶೃಂಗಾರ ಮಾಡಿಕೊಳ್ಳುತ್ತಿದ್ದರು. ಹೀಗಾಗಿ ಹಲವು ವಿನ್ಯಾಸದ ಒಡವೆಗಳು ಆಗಿನ ಕಾಲದಲ್ಲಿ ವಿಜೃಂಭಿಸುತ್ತಿದ್ದವು. ವಜ್ರದ ಒಡವೆಗಳು ಪ್ರಮುಖ ಸ್ಥಾನ ಪಡೆದಿದ್ದವು. ಈ ಪೊಲ್ಕಿ ಆಭರಣವೂ ಮೊಘಲರ ಕಾಲದಿಂದಲೇ ಬಂದ ಆಭರಣ, ವಿನ್ಯಾಸ, ಟ್ರೆಂಡ್‌ನಲ್ಲಿ ಮಾರ್ಪಾಡುಗೊಳ್ಳುತ್ತಾ ಪೊಲ್ಕಿ ಆಭರಣ ಈಗ ಫ್ಯಾಷನ್‌ಪ್ರಿಯರನ್ನು ಮೋಡಿ ಮಾಡುತ್ತಿದೆ. ಸೆಲೆಬ್ರಿಟಿಗಳೂ ಇಷ್ಟಪಟ್ಟು ತೊಟ್ಟುಕೊಳ್ಳುತ್ತಿದ್ದಾರೆ.

ಇದನ್ನು ವ್ಯಾಕ್ಸ್ ಮೂಲಕ ಮುಚ್ಚಲಾಗುತ್ತದೆ. ಎರಡೂ ವಿನ್ಯಾಸದವು ವಿಭಿನ್ನ ಲುಕ್ ಕೊಡುತ್ತವೆ.

### ದುಬಾರಿ ಒಡವೆ

‘ಪೊಲ್ಕಿ ನೆಕ್ಲೇಸ್ ಬಹು ದುಬಾರಿ. ಏಕೆಂದರೆ ಇದರಲ್ಲಿ 24 ಕ್ಯಾರಟ್ ಶುದ್ಧ ಚಿನ್ನ ಬಳಸಲಾಗುತ್ತದೆ. ಅನ್‌ಕಟ್ ಡೈಮಂಡ್ ಹರಳುಗಳೂ ದುಬಾರಿ. ಜೊತೆಗೆ ಬಣ್ಣಬಣ್ಣದ ವಜ್ರದ ಹರಳುಗಳ ಬೆಲೆಯೂ ಹೆಚ್ಚು. ಜೊತೆಗೆ ತಾಜಾ ಮುತ್ತುಗಳನ್ನೂ ಬಳಸಲಾಗುತ್ತದೆ. ರೋಸ್‌ಕಟ್ ಮಾದರಿಯ ಪೊಲ್ಕಿ ನೆಕ್ಲೇಸ್ ಮಾಡಲು ತುಂಬ ಸಮಯವೂ ತೆಗೆದುಕೊಳ್ಳುತ್ತದೆ. ಹೀಗಾಗಿ ಈ ವಿನ್ಯಾಸವೂ ಅನನ್ಯವಾಗಿರುತ್ತದೆ’ ಎಂದು ಹೇಳುತ್ತಾರೆ ಮಂಗಳೂರಿನ ಆಭರಣ ವರ್ತಕ ವಸಂತ್ ಶೆಟ್ಟಿ.

‘ಪೊಲ್ಕಿ ಆಭರಣಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿಯೂ ಸದಾ ಬೇಡಿಕೆ. ಪೊಲ್ಕಿ ನೆಕ್ಲೇಸ್‌ನಲ್ಲಿ ಬೀಡೆಡ್, ಕುಂದನ್, ಮುತ್ತು, ಬಣ್ಣದ ಹರಳುಗಳನ್ನೂ ಬಳಸುವ ಕಾರಣ ಹೆಂಗಳೆಯರಿಗೆ ಇದು ಬಹಳ ಮೆಚ್ಚಿಗೆಯಾಗುತ್ತದೆ. ಇದರಿಂದ ಬೇಡಿಕೆಯೂ ಹೆಚ್ಚುತ್ತಿದೆ’ ಎನ್ನುತ್ತಾರೆ ವಸಂತ್.

ಪೊಲ್ಕಿ ನೆಕ್ಲೇಸ್‌ನಂತೆಯೇ ಕುಂದನ್ ಒಡವೆಗಳೂ ಈಗ ಜನಪ್ರಿಯ. ಕುತ್ತಿಗೆ ಸುತ್ತ ಬಿಗಿದಪ್ಪುವ ಕುಂದನ್ ನೆಕ್ಲೇಸ್ ಟ್ರೆಂಡ್ ಕೂಡ ಆಗಿದೆ. ಹೆಚ್ಚಿನ ಹೊಳಪು ಇರದ ಆಭರಣ ನೀಟ್ ಆಗಿ ಕಾಣುವುದು. ಜೊತೆಗೆ ಇದನ್ನು ಮಿಕ್ಸ್ ಅಂಡ್ ಮ್ಯಾಚ್ ಆಗಿಯೂ ಬಳಸಬಹುದು.

ಸಾಂಪ್ರದಾಯಿಕ ಮತ್ತು ಆಧುನಿಕ ಎರಡೂ ಮನೋಭಾವದ ಮಹಿಳೆಯರನ್ನು ಸೆಳೆಯುವ ಪೊಲ್ಕಿ ನೆಕ್ಲೇಸ್ ಹಾಗೂ ಕುಂದನ್ ಒಡವೆ ಟ್ರೆಂಡ್ ಎವರ್‌ಗ್ರೀನ್ ಆಗುವುದರಲ್ಲೂ ಸಂಶಯವಿಲ್ಲ.



# ಮೊಟ್ಟೆ ಫೇಸ್‌ಮಾಸ್ಕ್

**ತ್ವಚೆಯ** ಅಂದ ಹೆಚ್ಚಿಸಲು, ಮೊಡವೆ, ಅಕ್ನೆಯಂತಹ ಮುಖದ ಮೇಲೆ ಬರದಂತೆ ತಡೆಯಲು ಸೌಂದರ್ಯಪ್ರಿಯರು ಹರಸಾಹಸ ಮಾಡಬೇಕಾಗುತ್ತದೆ. ಫೇಷಿಯಲ್, ಫೇಸ್‌ಮಾಸ್ಕ್‌ಗಳು ತ್ವಚೆಯ ತಾಜಾತನಕ್ಕೆ ನೆರವಾಗುತ್ತವೆ. ವಿವಿಧ ರೀತಿಯ ಮಾಸ್ಕ್ ಮನೆಯಲ್ಲೇ ತಯಾರಿಸಿ ಹಾಕಿಕೊಳ್ಳುವುದರಿಂದ ವಯಸ್ಸು ನಲವತ್ತು ದಾಟಿದರೂ ಇಪ್ಪತ್ತರ ಸುಂದರಿಯಂತೆ ಕಂಗೊಳಿಸಬಹುದು.

ಮೊಟ್ಟೆ ಬಳಸಿ ಮಾಸ್ಕ್ ತಯಾರಿಸುವುದು ತ್ವಚೆಯ ಅಂದ ಹೆಚ್ಚಿಸಲು ಸಹಕಾರಿ. ಇದನ್ನು ಮಾಡೋದು ಹೇಗೆ? ಬಹಳ ಸುಲಭ. ಸುಕ್ಕು ನೆರಿಗೆಯನ್ನು ನಿವಾರಿಸಲು ಉತ್ತಮ ಮನೆ ಔಷಧಿಯೆಂದರೆ ಮೊಟ್ಟೆ. ಮೊಟ್ಟೆಯ ಬಿಳಿ ಭಾಗಕ್ಕೆ ಎರಡು ಚಮಚ ಗ್ಲಿಸರಿನ್ ಎರಡು ಚಮಚ ಪನ್ನೀರನ್ನು ಬೆರೆಸಿ ಮುಖ, ಕತ್ತಿನ ಭಾಗಕ್ಕೆ ಲೇಪಿಸಿಕೊಳ್ಳಿ. ಒಣಗಿದ ನಂತರ ಉಗುರು ಬೆಚ್ಚಗಿನ ನೀರಿನಿಂದ ಮುಖ ತೊಳೆದು ಬಿಡಿ. ಇದರ ಪ್ರಯೋಗದಿಂದ ಸುಕ್ಕು ಕಡಿಮೆಯಾಗುತ್ತದೆ.

ಹಾಗೆಯೇ ಈರುಳ್ಳಿ ಮಾಸ್ಕ್ ಕೂಡ ತ್ವಚೆಯ ಆರೋಗ್ಯ ಕಾಪಾಡುತ್ತದೆ. ಈರುಳ್ಳಿ ಆ್ಯಂಟಿ ಸೆಪ್ಟಿಕ್‌ನಂತೆ ಕೆಲಸ ಮಾಡುತ್ತದೆ. ಈರುಳ್ಳಿ ರಸದ ಜೊತೆ ಜೇನನ್ನು ಮಿಶ್ರಣ ಮಾಡಿ ಸುಕ್ಕು ಇರುವೆಡೆ ಹಚ್ಚಿದರೆ ವಾಸಿಯಾಗುವುದು.

ಹೊಟ್ಟೆ ಉರಿಯುಂಟು ಮಾಡುವ ಮಸಾಲೆ ಪದಾರ್ಥ, ಎಣ್ಣೆ ಪದಾರ್ಥಗಳನ್ನು ಸೇವಿಸಕೂಡದು. ಅದರ ಬದಲು ಮೊಳಕೆ ಬಂದ ಕಾಳು, ಹಸಿರು ತರಕಾರಿಗಳ ಸಲಾಡ್‌ಗಳನ್ನು ಸೇವಿಸಿದರೆ ಪ್ರತಿಶತ ಸುಕ್ಕುಗಳನ್ನು ಕಡಿಮೆ ಮಾಡಬಹುದು. ಕಣ್ಣಿನ ಅಕ್ಕಪಕ್ಕದಲ್ಲಿ ಮೃದುವಾದ ಚರ್ಮವಿರುತ್ತದೆ. ಇದಕ್ಕೆ ಆ್ಯಂಟಿ ರಿಂಕಲ್ಸ್ ಕ್ರೀಮ್‌ಗಳನ್ನು ಹಚ್ಚಿದರೆ ಸುಕ್ಕು ಉಂಟಾಗುವುದು ಕಡಿಮೆಯಾಗುತ್ತದೆ.

### ಕ್ರೀಮ್‌ಗಳು

ಇವು ಕೂಡಾ ತ್ವಚೆಯನ್ನು ಆರೋಗ್ಯವಾಗಿಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸುಕ್ಕು ಪ್ರೊಟೀನ್‌ನ ಕೊರತೆಯಿಂದಲೂ ಆಗಿರುತ್ತದೆ. ಇದನ್ನು ಹೋಗಲಾಡಿಸಲು ಮಾರುಕಟ್ಟೆಯಲ್ಲಿ ಬಗೆ ಬಗೆಯ ಕ್ರೀಮ್‌ಗಳು ದೊರೆಯುತ್ತವೆ. ಕೆಲ ಹರ್ಬಲ್ ಕ್ರೀಮ್‌ಗಳೂ ಸಿಗುತ್ತವೆ. ಇದರಲ್ಲಿ ಹೆಚ್ಚಿನ ಅಡ್ಡಪರಿಣಾಮಗಳಿರುವುದಿಲ್ಲ.

### ಅಲೊವೆರಾ

ಮುಖದ ಚರ್ಮ ಕಾಂತಿಯುತವಾಗಿರಲು ಅಲೊವೆರಾ ಉತ್ತಮ ಔಷಧಿ. ಇದರ ತಿರುಳನ್ನು ಮುಖಕ್ಕೆ ಹಚ್ಚುವುದರಿಂದ ಕಲೆಗಳು ಮಾಯವಾಗುತ್ತವೆ.

–ಶಿವಲೀಲಾ ಸೊಪ್ಪಿಮಠ